ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 145
2. ಮಾನ್ಯ ಸದಸ್ಯರ ಹೆಸರು ಶ್ರೀ ಎಸ್. ರವಿ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು)
3. ಉತ್ತರಿಸಬೇಕಾದ ದಿನಾಂಕ 21/09/2020
4. ಉತ್ತರಿಸುವವರು ಮಾನ್ಯ ಕಾರ್ಮಿಕ ಮತ್ತು ಸಕ್ಕರೆ ಸಚಿವರು

ಕ್ರ ಸಂ.	ಪ್ರಶ್ನೆ	ಉತ್ತರ
(ಅ)	2020-21ನೇ ಸಾಲಿನ ಆಯವ್ಯಯದಲ್ಲಿ ಘೋಷಣೆ ಮಾಡಿದಂತೆ ನಗರ ಪ್ರದೇಶಗಳಲ್ಲಿ ದುಡಿಯುತ್ತಿರುವ ಕಟ್ಟಡ ಕಾರ್ಮಿಕರು ಮತ್ತು ಅವರ ಕುಟುಂಬಸ್ಥರಿಗೆ ಆರೋಗ್ಯ ರಕ್ಷಣೆ ನೀಡುವ ದೃಷ್ಟಿಯಿಂದ ಎಷ್ಟು "ಮೊಬೈಲ್ ಕ್ಲಿನಿಕ್"ಗಳನ್ನು ಪ್ರಾರಂಭಿಸಲಾಗಿದೆ.	**ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ:** 2020-21 ನೇ ಸಾಲಿನ ಆಯವ್ಯಯದಲ್ಲಿ ಘೋಷಣೆ ಮಾಡಿದಂತೆ ನಗರ ಪ್ರದೇಶಗಳಲ್ಲಿ ದುಡಿಯುತ್ತಿರುವ ಕಟ್ಟಡ ಕಾರ್ಮಿಕರು ಮತ್ತು ಅವರ ಕುಟುಂಬಸ್ಥರಿಗೆ ಆರೋಗ್ಯ ರಕ್ಷಣೆ ನೀಡುವ ದೃಷ್ಟಿಯಿಂದ ಪ್ರಾಥಮಿಕವಾಗಿ 10 "ಮೊಬೈಲ್ ಕ್ಲಿನಿಕ್" ಗಳನ್ನು ಪ್ರಾರಂಭಿಸುವ ಕಾರ್ಯ ಪ್ರಗತಿಯಲ್ಲಿದೆ.
(ಆ)	ಪ್ರಾರಂಭಿಸಿದ್ದಲ್ಲಿ ಇದುವರೆವಿಗೂ ಎಷ್ಟು ಜನ ಕಾರ್ಮಿಕರು ಇದರ ಪ್ರಯೋಜನ ಪಡೆದುಕೊಂಡಿದ್ದಾರೆ:	ಮೊಬೈಲ್ ಕ್ಲಿನಿಕ್‌ಗಳು ಇನ್ನು ಪ್ರಾರಂಭಗೊಂಡಿರದ ಕಾರಣ ಇನ್ನೂ ಯಾರು ಇದರ ಪ್ರಯೋಜನ ಪಡೆದುಕೊಂಡಿರುವುದಿಲ್ಲ.
(ಇ)	ಈ ಯೋಜನೆಯನ್ನು ಇನ್ನು ಪ್ರಾರಂಭಿಸದೆ ಇದ್ದಲ್ಲಿ ಯಾವಾಗ ಪ್ರಾರಂಭಿಸಲಾಗುವುದು: ವಿಳಂಬಕ್ಕೆ ಕಾರಣವೇನು:	ಕೋವಿಡ್-19 ಹಿನ್ನೆಲೆಯಲ್ಲಿ ಹೊಸ ಯೋಜನೆಗಳನ್ನು ಪ್ರಾರಂಭಿಸಲು ವಿಳಂಬವಾಗಿರುತ್ತದೆ. ಪ್ರಸ್ತುತ ಮೊಬೈಲ್ ಕ್ಲಿನಿಕ್‌ಗಳನ್ನು ತೆರೆಯಲು ಅಗತ್ಯ ಕ್ರಮಕೈಗೊಳ್ಳಲಾಗುತ್ತಿದೆ.
(ಈ)	ವಲಸೆ ಕಾರ್ಮಿಕರ ಸಂಖ್ಯೆ ಎಷ್ಟು: ಈ ವಲಸೆ ಕಾರ್ಮಿಕರಿಗೆ ಲಾಕ್‌ಡೌನ್ ಸಂದರ್ಭದಲ್ಲಿ ಯಾವ ಯಾವ ರೀತಿಯ ಕಿಟ್‌ಗಳನ್ನು ವಿತರಿಸಲಾಗಿದೆ: ಇದಕ್ಕೆ ತಗುಲಿದ ವೆಚ್ಚವೆಷ್ಟು: (ತಾಲ್ಲೂಕುವಾರು ಮಾಹಿತಿ ನೀಡುವುದು)	ಕೋವಿಡ್-19 ಸಂದರ್ಭದಲ್ಲಿ ಹೊರ ರಾಜ್ಯಗಳಿಂದ ಬಂದ ವಲಸೆ ಕಾರ್ಮಿಕರ ಸಂಖ್ಯೆ: 177526 (ದಿನಾಂಕ:14-08-2020ರವರೆಗೆ) ಕರ್ನಾಟಕ ರಾಜ್ಯದಿಂದ ಹೊರ ರಾಜ್ಯಗಳಿಗೆ ವಲಸೆ ಹೋಗಿರುವ ಕಾರ್ಮಿಕರ ಸಂಖ್ಯೆ:466582 (ದಿನಾಂಕ: 06-07-2020) ಈ ಮಾಹಿತಿಯನ್ನು ನಿಖರವಾದ ಮಾಹಿತಿಯನ್ನು ಪಡೆಯಲು ಕಾರ್ಮಿಕ ಇಲಾಖೆಯಿಂದ ಯಾವುದೇ ಸಮೀಕ್ಷೆ ನಡೆದಿರುವುದಿಲ್ಲ. ಈ ಕಾರಣಕ್ಕಾಗಿ ವಲಸೆ ಕಾರ್ಮಿಕರ ನಿಖರವಾದ ಸಂಖ್ಯೆಯ ಬಗ್ಗೆ ಮಾಹಿತಿ ಇರುವುದಿಲ್ಲ. ಲಾಕ್‌ಡೌನ್ ಸಂದರ್ಭದಲ್ಲಿ ವಲಸೆ ಕಾರ್ಮಿಕರು ಸೇರಿದಂತೆ ಕಟ್ಟಡ ಕಾರ್ಮಿಕರು ಮತ್ತು ಅಸಂಘಟಿತ ಕಾರ್ಮಿಕರಿಗೆ 89,86,533 ಸಿದ್ದಪಡಿಸಿದ ಆಹಾರದ ಪ್ಯಾಕೆಟ್‌ಗಳನ್ನು ಹಾಗೂ 6,08,000 ಆಹಾರ ಸಾಮಾಗ್ರಿಗಳ ಕಿಟ್‌ಗಳನ್ನು ಬೇಡಿಕೆಯ ಆಧಾರದ ಮೇಲೆ ವಿತರಿಸಲಾಗಿರುತ್ತದೆ. ಸಿದ್ದಪಡಿಸಿದ ಆಹಾರ ಕಿಟ್‌ಗಳಿಗಾಗಿ ರೂ. 25,73,69,236/- ಗಳ ಮೊತ್ತ ಮತ್ತು ಆಹಾರ ಸಾಮಾಗ್ರಿಗಳ ಕಿಟ್‌ಗಳಿಗಾಗಿ ರೂ. 46,12,95,075/- ಗಳ ಮೊತ್ತವನ್ನು ಖರ್ಚು ಮಾಡಲಾಗಿರುತ್ತದೆ. ಆಹಾರ ಸಾಮಾಗ್ರಿಗಳ ಕಿಟ್ ವಿತರಣೆಯ ಪ್ರದೇಶವಾರು ವಿವರವನ್ನು **ಅನುಬಂಧ-1** ರಲ್ಲಿ ನೀಡಿದೆ.

(ಉ)	ಕೋವಿಡ್–19ರ ಪ್ರಯುಕ್ತ ಲಾಕ್‌ಡೌನ್ ಸಂಧರ್ಭದಲ್ಲಿ ತಮ್ಮ ಇಲಾಖೆ ವತಿಯಿಂದ ವಿವಿಧ ವರ್ಗದವರಿಗೆ ವಿತರಿಸಲಾದ ಪರಿಹಾರಗಳೇನು: ಅದಕ್ಕೆ ತಗುಲಿದ ವೆಚ್ಚಗಳೆಷ್ಟು? (ತಾಲ್ಲೂಕುವಾರು ಮಾಹಿತಿ ನೀಡುವುದು)	**<u>ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ</u>** ಕೋವಿಡ್–19ರ ತುರ್ತು ಸಂದರ್ಭದಲ್ಲಿ ಸರ್ಕಾರವು ಲಾಕ್‌ಡೌನ್ ಜಾರಿಗೊಳಿಸಿದ್ದ ಪರಿಣಾಮವಾಗಿ ಕಾರ್ಮಿಕರಿಗೆ ಆರ್ಥಿಕವಾಗಿ ನಷ್ಟವಾಗಿರುವುದನ್ನು ಗಮನಿಸಿ, ದಿನಾಂಕ: 06–05–2020ರಂದು, ಅಗಸರು ಹಾಗೂ ಕ್ಷೌರಿಕ ವೃತ್ತಿಯಲ್ಲಿ ತೊಡಗಿರುವ ಅಸಂಘಟಿತ ಕಾರ್ಮಿಕರಿಗೆ ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯ ಮೂಲಕ ಒಂದು ಬಾರಿ ತಲಾ ರೂ.5,000/–ಗಳ ನೆರವನ್ನು ಘೋಷಿಸಿರುತ್ತಾರೆ. ನಿಗಧಿತ ಅಂತಿಮ ದಿನಾಂಕ:15–08–2020 ರವರೆಗೆ ಅಗಸ ವೃತ್ತಿ ನಿರ್ವಹಿಸುತ್ತಿರುವ 74,782 ಮತ್ತು ಕ್ಷೌರಿಕ ವೃತ್ತಿ ನಿರ್ವಹಿಸುತ್ತಿರುವ 66,820 ಅರ್ಜಿದಾರರು ಸೇರಿದಂತೆ ಒಟ್ಟು 1,41,602 ಅರ್ಜಿಗಳನ್ನು ಸ್ವೀಕರಿಸಲಾಗಿದೆ. ಫಲಾನುಭವಿಗಳಿಂದ ಸ್ವೀಕೃತವಾದ ಅರ್ಜಿಗಳಲ್ಲಿ ಈವರೆಗೆ 1,14,388 ಅರ್ಜಿದಾರರಿಗೆ ತಲಾ ರೂ.5,000/–ಗಳಂತೆ ಒಟ್ಟು ರೂ.57.19ಕೋಟಿ ಮೊತ್ತವನ್ನು ಅರ್ಹ ಫಲಾನುಭವಿಗಳ ಬ್ಯಾಂಕ್ ಖಾತೆಗೆ ಡಿ.ಬಿ.ಟಿ ಮೂಲಕ ವರ್ಗಾಯಿಸಲಾಗಿದೆ. ಯೋಜನೆಯ ಷರತ್ತುಗಳನ್ನು ಪೂರ್ಣಗೊಳಿಸದ 1924 ಅರ್ಜಿಗಳನ್ನು ತಿರಸ್ಕರಿಸಲಾಗಿದ್ದು, ತಾಂತ್ರಿಕ ಕಾರಣಗಳು ಸೇರಿದಂತೆ ಷರತ್ತುಗಳನ್ನು ಪೂರೈಸದ ಹಾಗೂ ಕ್ರಮಬದ್ಧವಲ್ಲದ 25,290 ಅರ್ಜಿಗಳ ಮರು ಪರಿಶೀಲನೆ ನಡೆಸಲಾಗುತ್ತಿದ್ದು, ಅರ್ಹ ಫಲಾನುಭವಿಗಳು ಕಂಡು ಬಂದಲ್ಲಿ ನೆರವಿನ ಮೊತ್ತವನ್ನು ಪಾವತಿಸಲು ಕ್ರಮಕೈಗೊಳ್ಳಲಾಗುವುದು. ಇದಲ್ಲದೇ ಕೋವಿಡ್–19ರ ಹಿನ್ನೆಲೆಯಲ್ಲಿ ಮಂಡಳಿಯಿಂದ ತೆಗೆದುಕೊಂಡ ಇತರೆ ಕ್ರಮಗಳು:– **<u>ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ</u>** ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಿಂದ ನೋಂದಾಯಿತ ಕಟ್ಟಡ ಕಾರ್ಮಿಕರಿಗೆ ಪರಿಹಾರವಾಗಿ ತಲಾ ರೂ. 5000/–ಗಳನ್ನು ನೀಡಲಾಗಿರುತ್ತದೆ. ಕರ್ನಾಟಕ ರಾಜ್ಯದಲ್ಲಿ ಒಟ್ಟು 16,48,431 ನೋಂದಾಯಿತ ಕಟ್ಟಡ ಕಾರ್ಮಿಕ ಫಲಾನುಭವಿಗಳಿಗೆ ರೂ. 82421 ಕೋಟಿಗಳಷ್ಟು ಪರಿಹಾರ ನೀಡಲಾಗಿರುತ್ತದೆ. ಜಿಲ್ಲಾವಾರು ವಿವರಗಳನ್ನು **<u>ಅನುಬಂಧ–2 ರಲ್ಲಿ ಒದಗಿಸಿದೆ.</u>**

ಕಾಇ 294 ಎಲ್‌ಇಟಿ 2020

21/9/2020

(ಅರಬೈಲ್ ಶಿವರಾಂ ಹೆಬ್ಬಾರ್)
ಮಾನ್ಯ ಕಾರ್ಮಿಕ ಮತ್ತು ಸಕ್ಕರೆ ಸಚಿವರು

DISTRICT WISE DETAILS OF THE NUMBER OF MIGRANT WORKERS TRAVELLED TO THE STATE OF KARNATAKA AS ON 14.08.2020

SL No	District	Number of Migrants
1	BAGALKOT	3045
2	BALLARI	4125
3	BELAGAVI	7023
4	BENGALURU RURAL	11935
5	BENGALURU URBAN	60601
6	BIDAR	3536
7	CHAMARAJANAGARA	725
8	CHIKBALLAPURA	668
9	CHIKKAMAGALURU	1055
10	CHITRADURGA	904
11	DAKSHIN KANNADA	5240
12	DAVANGERE	906
13	DHARWAD	6728
14	GADAG	3860
15	HASSAN	2039
16	HAVERI	1595
17	KALABURAGI	11643
18	KODAGU	1662
19	KOLAR	3514
20	KOPPAL	1914
21	MANDYA	1776
22	MYSURU	4077
23	RAICHUR	8139
24	RAMANAGARA	1116
25	SHIVAMOGGA	1452
26	TUMAKURU	1948
27	UDUPI	5733
28	UTTAR KANNADA	5629
29	VIJAYAPURA	10279
30	YADGIR	4659
	Total	**1,77,526**

Annexure B

STATE WISE DETAILS OF THE NUMBER OF MIGRANT WORKERS TRAVELLED FROM THE STATE OF KARNATAKA AS ON 06.07.2020

SL No	State	Number of Migrants
1.	ANDHRA PRADESH	15517
2.	ARUNACHAL PRADESH	52
3.	ASSAM	38324
4.	BIHAR	122887
5.	CHATTISGARH	2582
6.	CHANDIGARH	9
7.	DAMAN AND DIU	20
8.	DELHI	29
9.	GOA	349
10.	GUJARAT	257
11.	HARYANA	30
12.	HIMACHAL PRADESH	264
13.	JAMMU AND KASHMIR	2950
14.	JHARKHAND	34949
15.	KERALA	1043
16.	MADHYA PRADESH	4111
17.	MAHARASHTRA	30877
18.	MANIPUR	3090
19.	MEGHALAYA	16
20.	MIZORAM	1456
21.	NAGALAND	1529
22.	ODISHA	22643
23.	PUDUCHERRY	56
24.	PUNJAB	60
25.	RAJASTHAN	22978
26.	SIKKIM	7
27.	TAMIL NADU	12438
28.	TELANGANA	4782
29.	TRIPURA	5704
30.	UTTARAKHAND	4653
31.	UTTAR PRADESH	90911
32.	WEST BENGAL	42009
	TOTAL	**4,66,582**